ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಆದುದರಿಂದ ಈ ವಿಚಾರಗಳನ್ನೆಲ್ಲಾ ಪರಿಶೀಲನೆಮಾಡಿ, ಆದಷ್ಟು ಬೇಗ ವಿದ್ಯಾರ್ಥಿಗಳು ಸ್ವೈಚ್ಛಿಕವನ್ನು ನಿಲ್ಲಿಸಿ, ಅವರಿಗೆ ಅನುಕೂಲ ಮಾಡಿಕೊಡುವುದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ, ಮತ್ತು ಆ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ವಿವರಣೆಯನ್ನು ತಮ್ಮಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ಡಿ ದೇವೇಗೌಡ.—ಇವತ್ತು ಸಂಜೆ ವಿದ್ಯಾರ್ಥಿಗಳನ್ನು ಭೇಟಿ ಮಾಡುತ್ತೇನೆ ಎಂದು ಹೇಳಿದಿರಿ, ಅದರ ಫಲಿತಾಂಶ ಏನು ಎನ್ನುವುದನ್ನು ನಭೆಗೆ ತಿಳಿಸುತ್ತೀರಾ ?

SRI H. M CHANNABASAPPA.—They are coming forward. I have advised them to give up agitational approach and the Government have assured them that their requests will be considered and the facilities will be given as far as possible Perhaps they are consulting their colleagues and coming again. ಮಾನ್ಯ ಶಾವಣ್ಣನವರು ಬಹಳ ಕಾತುರತೆಯಿಂದ ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಇದನ್ನು ಹಗುರವಾಗಿ ತಳ್ಳಿಹಾಕಬಾರದು ಎಂದು ಹೇಳಿದ್ದಾರೆ. ಮುಖ್ಯವಾದ ಯಾವುದನ್ನೂ ತಳ್ಳಿಹಾಕಬೇಕು ಎನ್ನುವುದು ಸರ್ಕಾರದ ಅಭಿಪ್ರಾಯವಲ್ಲ. ನಾನು ಹಿಂದೆ ಹೇಳಿದಂತೆ ವಿದ್ಯಾರ್ಥಿಗಳು ಫಿಗನೇ ತಾರೀಖು ಅರ್ಜಿಕೊಟ್ಟು 28ನೇ ತಾರೀಖು ಹಂಗರ್ ಸ್ಟ್ರೈಕ್ ಮಾಡಿದ್ದಾರೆ ಇವೆಲ್ಲ ವಿಷಯಗಳು ಬಹಳ ಗಹನವಾದವು ಈ ವಿಷಯಗಳೆಲ್ಲ ಕೆಲವು ಅಡ್ಮಿನಿಸ್ಟ್ರೇಟಿವ್ ಆಕ್ಷನ್‌ಗೆ ಸಂಬಂಧಪಟ್ಟಿವೆ ಮತ್ತೆ ಕಲವು ಅಕೆಡೆಮಿಕ್‌ಗೆ ಸಂಬಂಧಪಟ್ಟಿವೆ. ಈ ವಿಷಯಗಳೆಲ್ಲಾ ಪೂರ್ಣವಾಗಿ ಪರಿಶೀಲನೆಗೆ ಒಳಪಡುತ್ತದೆ. ನ್ಯಾಷನರ್ ಇಂಡಿಯನ್ ಮೆಡಿಕರ್ ಕೌನ್ಸಿಲ್ ಇನ್ನೂ ಅನೇಕ ಸಂಸ್ಥೆಗಳು ಪೂರ್ಣವಾಗಿ ಪರಿಶೀಲಿಸಿ ಹೇಗೆಮಾಡಬೇಕು ಎಂದು ತಜ್ಞರು ಹೇಳಬೇಕು. ಎಕ್ಸಾಮಿನೇಷನ್ಸ್ ಬೇಡ ಅಟೆಂಡೆನ್ಸ್ ಬೇಡ, ಕೋಡಿಂಗ್ ಸಿನ್ಡ್ರಂ, ಕ್ಯಾರಿಓವರ್ ಸಿನ್ಡ್ರಂ—ಈ ವಿಷಯಗಳನ್ನೆಲ್ಲಾ ತಜ್ಞರು ನಿಧಾನವಾಗಿ ಕುಳಿತುಕೊಂಡು ಆಲೋಚನೆ ಮಾಡಬೇಕು. ನಿನ್ನೆ ವಿದ್ಯಾರ್ಥಿಗಳು ಬಂದಿದ್ದರು. ಅವರ ಕುಂದುಕೊರತೆಗಳನ್ನು ಹೇಳಿದರು. ನಾನು ಈ ವಿಷಯಗಳು ಬಹಳ ಗಹನವಾದುವು, ಯಾವ ವಿಷಯಗಳನ್ನು ನುಲಭವಾಗಿ ಮಾಡಬಹುದೋ ಅವುಗಳನ್ನು ಯೋಚನೆ ಮಾಡುತ್ತೇನೆ, ಯಾವುದನ್ನು ಸ್ವಲ್ಪ ವಿಚಾರಮಾಡಿ ತೀರ್ಮಾನ ತೆಗೆದು ಕೊಳ್ಳಬೇಕೋ ಅವುಗಳ ತೀರ್ಮಾನ ತೆಗೆದುಕೊಳ್ಳುತ್ತೇನೆ ಈ ವಿಷಯಗಳು ಬಹಳ ಗಹನವಾಗಿರುವುದರಿಂದ ಅಜಿಟೇಷನಲ್ ಅಪ್ರೋಚ್ ಮಾಡುವುದನ್ನು ಬಿಟ್ಟುಬಿಡಿ ನಿಮ್ಮ ಕುಂದುಕೊರತೆಗಳೇನಿವೆ ಅವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿಮ್ಮ ಹಿತವನ್ನು ಸಾಧನೆ ಮಾಡುವುದಕ್ಕೋಸ್ಕರ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದೆ. ಅವರು ಯೋಚನೆ ಮಾಡಿ ಇವತ್ತು ಸಾಯಂಕಾಲ ಬರುತ್ತೇವೆ ಎಂದು ಹೇಳಿದ್ದಾರೆ. ಅವರು ಬಂದ ಮೇಲೆ ಏನಾಯಿತು ಎನ್ನುವುದನ್ನು ತಿಳಿಸುತ್ತೇನೆ.

Matter Under Rule 312 :

re : Appointment of Sri D. Kemparaj Urs as Managing Director of K. F. I. D. Corporation.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ ರೂಲ್ 312 ಪರಿಮಿತಿಯಲ್ಲಿ ಕರ್ನಾಟಕ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಡಳಿತ ಮಂಡಲಿ ತೆಗೆದುಕೊಂಡಿರತಕ್ಕ ನಿರ್ಣಯದ ಬಗ್ಗೆ ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದೇನೆ. ಈ ಆಡಳಿತ ಮಂಡಳಿ ತಾರೀಖು 10 1-1977 ರಂದು ಆ ಸಂಸ್ಥೆಯ ಒಬ್ಬ ಡೈರೆಕ್ಟರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಮಾಡಬೇಕು, ಅವರಿಗೆ ಕೆಲವು ಸವಲತ್ತುಗಳನ್ನು ಕೊಡಬೇಕು ಎಂದು ತೀರ್ಮಾನ ಮಾಡಿದೆ. ಶ್ರೀಮಾನ್ ಡಿ. ಕೆಂಪರಾಜ ಅರಸ್, ಡೈರೆಕ್ಟರ್ ಇನ್‌ಚಾರ್ಜ್ ಆಫ್ ದಿ ಕಂಪೆನಿ ಏನಿದ್ದಾರೆ ಅವರು ಮೊದಲು ಷೇರ್‌ಹೋಲ್ಡರ್ ಆಗಿದ್ದರು, ಆಮೇಲೆ ಅವರನ್ನು ಒಬ್ಬ ಡೈರೆಕ್ಟರನ್ನಾಗಿ ನೇಮಕಮಾಡಿದರು He is the Director in charge

of the Company to manage administration of the Company. The salary of the Director is Rs. 1500 and the medical allowance of Rs. 4500 per year ಅಲ್ಲದೆ ಕೂಡ ತೀರ್ಮಾನ ಮಾಡಿದ್ದಾರೆ ತಾರೀಖು 31-8-1976 ರಂದು ಸರ್ಕಾರ ಆದಕ್ಕೆ ಅಪ್ರೂವಲ್ ಕೊಟ್ಟಿದೆ. ಆ ಒಂದು ಹುಕುಂ ಪ್ರಕಾರ, Free House, Free Car and free telephone are given An expenditure up to Rs. 500 may be re-imbursed every month, and the total should not exceed Rs. 6,000 per month.

ಈ ಎಲ್ಲಾ ಷರತ್ತುಗಳ ಮೇಲೆ ಅವರನ್ನು ಡೈರೆಕ್ಟರ್ ಇನ್‌ಚಾರ್ಜ್ ಆಫ್ ದಿ ಕಂಪನಿ ಎಂದು ಮಾಡಿದ್ದಾರೆ. ಇವರನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ ನೇಮಕ ಮಾಡಬೇಕು ಎಂದು ಆಡಳಿತ ಮಂಡಳಿಯವರು 10ನೇ ಜನವರಿ 1977ರಂದು ನಿರ್ಣಯ ಮಾಡಿದ್ದಾರೆ. ಈ ಸಭೆಯ ಅಧ್ಯಕ್ಷತೆಯನ್ನು ನಮ್ಮ ಮಾನ್ಯ ಸಚಿವರೇ ವಹಿಸಿದ್ದರು. ಆ ಒಂದು ಆಡಳಿತ ಮಂಡಳಿ ಯಾವರೀತಿ ತೀರ್ಮಾನ ಮಾಡಿದ್ದಾರೆ ಎಂದರೆ ರೆಮ್ಯುನರೇಷನ್ 2 500 ರೂಪಾಯಿ, ಹೌಸ್‌ರೆಂಟ್ 750 ರೂಪಾಯಿಗಳು, ಎಂಟರ್‌ಟೈನ್‌ಮೆಂಟ್‌ಗಾಗಿ 500 ರೂಪಾಯಿಗಳು ಒಂದು ತಿಂಗಳಿಗೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದಾರೆ

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ಎಂಟರ್‌ಟೈನ್‌ಮೆಂಟಿಗಾಗಿ 500 ರೂಪಾಯಿ ಏತಕ್ಕೆ ಅರ್ಥವಾಗಲಿಲ್ಲ.

ಶ್ರೀ ಹೆಚ್. ಡಿ ದೇವೇಗೌಡ.—ಅದರ ಬಗ್ಗೆ ತಾವೇ ಹೇಳಿ. This is the decision of the Board. I am reading it out :

> "Free telephone at residence, free motor car with driver and fuel ; medical benefit not exceeding one month's salary in a year 6000 rupees in three years subject to production of bills" ಇದನ್ನು ಮಾಡಿ ಒಂದು ನಿರ್ಣಯ ಮಾಡಿದ್ದಾರೆ.

ಒಂದನೇ ತಾರೀಖು ಜನವರಿಯಿಂದ ಪೂರ್ವಾನ್ವಯ ಜಾರಿ ಕೊಡಬೇಕು ಎಂದು ಮಾಡಿದ್ದಾರೆ. ಇವರನ್ನು 31-12-1981ರ ವರೆಗೆ ಅಂದರೆ 5 ವರ್ಷಗಳ ಕಾಲ ಈ ಹುದ್ದೆಯಲ್ಲಿ ಇಡಬೇಕೆಂದು ತೀರ್ಮಾನ ಮಾಡಿ 18-4-1977ಕ್ಕೆ ಸ್ಪೆಷರ್ ಜನರಲ್ ಬಾಡಿ ಮೀಟಿಂಗ್ ಕರೆದಿದ್ದಾರೆ. ಈಗ ನಮ್ಮ ಸರ್ಕಾರ 51 ಪರ್‌ಸೆಂಟ್ ಷೇರು ಇಟ್ಟುಕೊಂಡಿದೆ ಎಂದು ತಾವು ತಿಳಿಸಿದ್ದೀರಿ ಅದರ ಬಗ್ಗೆ ನನ್ನಲ್ಲಿ ವಿವರಣೆ ಇಲ್ಲ ಇದು ನಮ್ಮ ಸರ್ಕಾರದ ನಂಬಿಕೆ ಇದರ ಹಣವನ್ನು ಕಾಪಾಡತಕ್ಕದ್ದು ಈ ನಿರ್ದೇಶನದ ಪ್ರತಕ್ಕ ಎಲ್ಲ ಸದಸ್ಯರ ಕರ್ತವ್ಯ, ಈದ್ದರಿಂದ ನಾನು ಇದನ್ನು ಹೆಚ್ಚು ಲಂಬಿಸಿ ಮಾತನಾಡಲಕ್ಕೆ ಹೋಗುವುದಿಲ್ಲ ಮಾನ್ಯ ಸಚಿವರು ಈ ಒಂದು ಆಡಳಿತ ಮಂಡಳಿಯ ಸಭೆಯಲ್ಲಿ ಅಧ್ಯಕ್ಷ ಪೀಠವನ್ನು ಅಲಂಕರಿಸಿ ಇಂತಹ ನಿರ್ಣಯ ಮಾಡಿರತಕ್ಕದ್ದು ನಿಜಕೂ ವಿಷಾದಕರ. ತಾವು ಯಾವುದೇ ಪ್ರಭಾವಕ್ಕೂ ಮಣಿಯಬಾರದು, ಅವರು ಮುಖ್ಯಮಂತ್ರಿಗಳವರ ತಮ್ಮ ಇರಬಹುದು. ಒಂದು ಸಂಸ್ಥೆಯ ಹಿತರಕ್ಷಣೆ ಮಾಡ ವಾಗ ಎಚ್ಚರಿಕೆ ವಹಿಸಿ ನಡೆಯಬೇಕು, ಆ ರೀತಿ ನಡೆಯದೇ ಹೋದರೆ ಬಹಳ ದೂರ ನಡೆಯಲಿಕ್ಕೆ ಬಿಡುವುದಿಲ್ಲ ಎಂದು ನಾನು ಎಚ್ಚರಿಕೆ ರೂಪದಲ್ಲಿ ಹೇಳಲಿಕ್ಕೆ ಇಚ್ಛಿಸಿದ್ದೇನೆ. ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯವರು ಈ ಸಂಸ್ಥೆಯ ಬಗ್ಗೆ ಸಾಕಷ್ಟು ಹೇಳಿದ್ದಾರೆ, ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ ನಮ್ಮ ಒಂದು ಬಂಡವಾಳ ಹೂಡಿರತಕ್ಕ ಸಂಸ್ಥೆಗೆ ಒಬ್ಬ ವ್ಯಕ್ತಿಯನ್ನ ನೇಮಕ ಮಾಡುವುದರಲ್ಲಿ ಇಷ್ಟು ತರಾತುರಿ ಕ್ರಮ ತೆಗೆದುಕೊಂಡು ಸರ್ಕಾರದ ಹಣಕ್ಕೆ ಚ್ಯುತಿ ತರುವಂತೆ ಮಾಡತಕ್ಕದ್ದು ಯೋಗ್ಯವಲ್ಲ. ಖಾಸಗಿ ಡೈರೆಕ್ಟರುಗಳಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಮಾಡತಕ್ಕ ಕಾಲದಲ್ಲಿ ಏನೊಂದು ಸೌಲಭ್ಯ ಕೊಡಬೇಕು ಎಂದು ಏನು ನಿಗದಿ ಮಾಡಿದ್ದಾರೆ ಆ ಕಾಯಿದೆಗೆ ಇದು ವಿರುದ್ಧವಾಗುತ್ತದೆ ಅದ್ದರಿಂದ ಇದನ್ನು ರದ್ದು ಮಾಡಬೇಕು, ಇದನ್ನು ರದ್ದು ಮಾಡದೇ ಹೋದರೆ ಇದರಿಂದ ದೊಡ್ಡ ಅಪಾಯ ನಿಮಗೆ ಸಂಭವಿಸುತ್ತದೆ ಎಂದು ಮುನ್ನೆಚ್ಚರಿಕೆ ಕೊಟ್ಟು, ಇದರ ಬಗ್ಗೆ, ಸ್ಪಷ್ಟವಾದ ಉತ್ತರ ತಿಳಿಸಬೇಕು ಎಂದು ಹೇಳುತ್ತೇನೆ.

† ಶ್ರೀ ಬಿ. ಸುಬ್ಬಯ್ಯಶೆಟ್ಟಿ.—(ವಾರ್ತಾ ಮತ್ತು ವಿದ್ಯುಚ್ಛಕ್ತಿ ಶಾಖೆಗಳ ರಾಜ್ಯ ಮಂತ್ರಿಗಳು).

ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ, ಶ್ರೀಮಾನ್ ಕೆಂಪರಾಜ್ ಅರಸ್ ಅವರು ಕಂಪನಿಯ ಷೇರ್‌ಹೋಲ್ಡರ್ ಹಾಗೂ ಡೈರೆಕ್ಟರ್ ಆಗಿದ್ದಾರೆ. ಕಂಪನಿ ರೆಸಲ್ಯೂಷನ್ ಪ್ರಕಾರ 29ನೇ ಅಕ್ಟೋಬರ್ 1974ರಲ್ಲಿ ಡೇ-ಟು-ಡೇ ಅಡ್ಮಿನಿಸ್ಟ್ರೇಷನ್ ನೆಡಸಲು ಕ್ಯೋನ್ಸ್ಯರ ಒಂದು ಕಮಿಟಿ ಆಫ್ ಮ್ಯಾನೇಜ್‌ಮೆಂಟ್ ಎಂದು ಮಾಡಿದ್ದರು. ಆ ಕಮಿಟಿ ಆಫ್ ಮ್ಯಾನೇಜ್‌ಮೆಂಟ್ ಆಗಾಗ ಕೂಡಿ ಕ್ರಮ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ, ಎಲ್ಲರೂ ಒಟ್ಟಿಗೆ ಬರಲಿಕ್ಕೆ ಆಗುವುದಿಲ್ಲ ಎಂದು ಹೇಳಿ 15ನೇ ಜೂನ್ 1975 ರಂದು ಇನ್ನೊಂದು ರೆಸಲ್ಯೂಷನ್ ಮಾಡಿ ಶ್ರೀಮಾನ್ ಕೆಂಪರಾಜ್‌ಅರಸ್ ಅವರನ್ನು ಡೈರೆಕ್ಟರನ್ನಾಗಿ ಮಾಡಿತು. ಅವರಿಗೆ ಕೆಲವು ಸವಲತ್ತುಗಳನ್ನು ನಿಗಧಿ ಮಾಡಿ ಅದಕ್ಕೆ ಸರ್ಕಾರ ಕೂಡ ಅನುಮತಿ ಕೊಟ್ಟಿದೆ. ತದನಂತರ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯವರು ಮ್ಯಾನೇಜಿಂಗ್ ಡೈರೆಕ್ಟರ್ ನೇಮಕ ಮಾಡಬೇಕು ಎಂದು ಏನು ಸಲಹೆ ಮಾಡಿದ್ದರು, ಆ ಒಂದು ಸಲಹೆ ಪ್ರಕಾರ ಮ್ಯಾನೇಜಿಂಗ್ ಡೈರೆಕ್ಟರ್ ನೇಮಕ ಮಾಡಲಿಕ್ಕೆ ಈ ಬೋರ್ಡ್ ನಿರ್ಣಯ ತೆಗೆದುಕೊಂಡಿದ್ದು, ಆ ನಿರ್ಣಯದ ಪ್ರಕಾರ ಶ್ರೀಮಾನ್ ಕೆಂಪರಾಜ ಅರಸ್ ಅವರನ್ನು 10ನೇ ಜನವರಿ 1977 ರಿಂದ ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ ಮಾಡಬಹುದು ಎನ್ನುವ ಬಗ್ಗೆ ಬೋರ್ಡ್ ಒಂದು ತರಾವನ್ನು ಮಂಜೂರು ಮಾಡಿತು. ಇದನ್ನು ಮಾಡುವಾಗ ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ಅವರು ಮಾನ್ಯಮುಖ್ಯಮಂತ್ರಿಗಳ ಸಹೋದರರು ಎಂದು ಮಂಜೂರು ಮಾಡಲಿಲ್ಲ.

ಶ್ರೀ ಎಸ್. ಮೈ. ಪಾಟೀಲ್.—ರಾಮಕೃಷ್ಣ ಪರಮಹಂಸರು, ವಿನೋಬಾ ಬಾವೆ ಎಂದು ಮಾಡಿದರೇನು?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಶ್ರೀಮಾನ್ ಕೆಂಪರಾಜ್ ಅರಸ್ ಅವರು ಕನ್ನಡ ಚಿತ್ರರಂಗದ ನಟರಾಗಿ, ಡೈರೆಕ್ಟರಾಗಿ, ಪ್ರೊಡ್ಯೂಸರಾಗಿ ಮಾಡಿದ ಏನೊಂದು ಕೊಡುಗೆ ಇದೆ ಅದನ್ನು ನಾವು ಈ ಸಮಯದಲ್ಲಿ ನೆನಸಿಕೊಳ್ಳಬೇಕಾಗಿದೆ. ಕನ್ನಡ ಚಿತ್ರರಂಗದಲ್ಲಿ ಬೇರೆಯವರು ಇದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ, ಆದರಲ್ಲಿ ಇವರು ಒಬ್ಬರು ಎಂದು ಹೇಳುತ್ತೇನೆ. ಬೋರ್ಡ್ ತಿರ್ಮಾನ ಮಾಡತಕ್ಕಂತಹ ಕಾಲದಲ್ಲಿ ಪ್ರತಿಯೊಂದು ಪರಿಗಣಿಸಿ ನೇಮಕ ಮಾಡಿದೆ. ಒಂದನೆಯದಾಗಿ ಅವರು ಲೋಕಾಸ್ಪ ಥಿಯೇಟರ್ಸ್ ಏನು ಇದೆ ಅದನ್ನು ಪ್ರಮೋಟ್ ಮಾತುವುದಕ್ಕೋಸ್ಕರ ಸಾಧಾರಣವಾಗಿ 16 ಥಿಯೇಟರ್ಸ್‌ಗಳಿಗೆ ಲೋನ್ಸ್ ಕೊಟ್ಟಿದೆ. ಇವುಗಳು ವಿವಿಧ ಸ್ಟೇಜಸ್‌ನಲ್ಲಿ ಇವೆ. ಈಗ ಎರಡು ಥಿಯೇಟರ್ಸ್‌ಗಳು ಪೂರ್ಣ ಆಗಿವೆ. ಇನ್ನು ಕೆಲವು ಥಿಯೇಟರ್ಸ್‌ಗಳಿಗೆ ಕೊಡುವುದು ಇದೆ. ಶ್ರೀಮಾನ್ ಕೆಂಪರಾಜ್ ಅರಸ್ ಅವರು ಡೈರೆಕ್ಟರಾಗಿ ಈ ಕೆಲಸವನ್ನು ಮಾಡಿದರು. ಈಗ ಕರ್ನಾಟಕದಲ್ಲಿ ಇನ್ನೊಂದು ಹೆಮ್ಮೆಯ ಸಂಗತಿ ಏನು ಎಂದು ಹೇಳಿದರೆ ರೆಕಾರ್ಡಿಂಗ್ ಯೂನಿಟ್ಟನ್ನು ಸ್ಥಾಪನೆ ಮಾಡಲಾಗಿದೆ ಮೊದಲು ಈ ರೆಕಾರ್ಡಿಂಗ್ ಸೌಲಭ್ಯ ಇರಲಿಲ್ಲ. ನಮ್ಮ ಕರ್ನಾಟಕದ ನಿರ್ಮಾಪಕರು ಬೇರೆ ಕಡೆಗೆ ಅಂದರೆ ಮದ್ರಾಸಿಗೋ ಬೊಂಬಾಯಿಗೋ ರೆಕಾರ್ಡಿಂಗ್ ಕೆಲಸಕ್ಕೆ ಹೋಗಬೇಕಾಗಿತ್ತು. ಈಗ ನಮ್ಮಲ್ಲಿಯೇ ಆ ಒಂದು ಸೌಲಭ್ಯ ಸಿಕ್ಕುವಂತೆ ಮಾಡಿದ್ದಾರೆ ಅಲ್ಲದೆ ಬ್ಲಾಕ್ ಅಂಡ್ ವೈಟ್ ಆಥವಾ ಕಲರ್ ಫಿಲಂಗೆ ರ್ಯಾಬೊರೇಟರಿ ಪ್ರೊಸೆಸಿಂಗ್ ಮಾಡುವುದಕ್ಕೆ ಅನುಕೂಲವಾಗುವ ಹಾಗೆ ಕೆಲಸ ಮಾಡಿದ್ದಾರೆ. ಆಮೇಲೆ ನಿರ್ಮಾಪಕರಿಗೆ ಬೇಕಾದ ಎಕ್ವಿಪ್‌ಮೆಂಟ್ಸ್ ತರುವಲ್ಲಿ ಬಹಳ ಮುತುವರ್ಜಿ ವಹಿಸಿ ಕೆಲಸ ಮಾಡಿದ್ದಾರೆ. ಅವರ ಸೇವೆಯಿಂದ ಕರ್ನಾಟಕ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಚೆನ್ನಾಗಿ ಕೆಲಸ ಮಾಡಲು ಸಾಧ್ಯವಿದೆ ಎಂಬ ದೃಷ್ಟಿಯಿಂದ ಬೋರ್ಡ್ ಈ ತೀರ್ಮಾನ ತೆಗೆದುಕೊಂಡಿದೆ. ಅವರ ಸಂಬಳ ಸವಲತ್ತುಗಳನ್ನು ನಿರ್ಣಯ ಮಾಡುವಾಗ ಆ ಸಮಯದಲ್ಲಿ ಸರ್ಕಾರ ಏನೊಂದು ನೋಟಿಫಿಕೇಷನ್ ಹೊರಡಿಸಿತ್ತು, ಆಗ ನಾನು ಇರಲಿಲ್ಲ. ಆ ಬಗ್ಗೆ ನನಗೆ ವಿಚಾರ ಗೊತ್ತಿರಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಮಂತ್ರಿಗಳು ಮತ್ತು ಬೋರ್ಡಿನ ಅಧ್ಯಕ್ಷರು ಹೀಗೆ ಹೇಳಿದರೆ ಹೇಗೆ?

SRI B. SUBBAIAH SHETTY,—I am admitting it. You take it in whatever sense. ನನಗೆ ಆ ನೋಟಿಫಿಕೇಷನ್ ಇಬೆ ಎಂದು ತಿಳಿದ ತಕ್ಷಣ ಇದನ್ನು ಪರಿಶೀಲನೆ ಮಾಡಬೇಕು, ಸಂಬಳನವರುತ್ತುಗಳ ಬಗ್ಗೆ ಇದಕ್ಕಿಂತ ಜಾಸ್ತಿ ಹೋಗುವುದಕ್ಕೆ ಸಾಧ್ಯ ಏಲ್ಲ ಎಂದು ನಾನು ತಿಳಿಸಿದ್ದೇನೆ. ಅದನ್ನು ಕೂಡಲೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಚ್. ಡಿ ದೇವೇಗೌಡ.—ಇದನ್ನು ಯಾವಾಗ ತಿಳಿಸಿದಿರಿ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ. —ನಿನ್ನೆ ದಿವಸ ತಿಳಿಸಿದ್ದೇನೆ.

ಶ್ರೀ ಸಿ. ಬೈರೇಗೌಡ —ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸರ್ಕಾರ ಹೊರಡಿಸಿದಂತಹ ನೋಟಿಫಿಕೇಷನ್ ನನ್ನ ಗಮನದಲ್ಲಿಲ್ಲ ನನಗೆ ಗೊತ್ತಿರಲಿಲ್ಲ ಎಂದು ಹೇಳಿದರೆ ಹೇಗೆ? ನಾನು ಮರೆತು ಕರ್ನಾಟಕ ರಾಜ್ಯವನ್ನು ಪಾಕಿಸ್ತಾನಕ್ಕೆ ಮಾರಿದ್ದೇನೆ ಎಂದು ನಾಳೆ ದಿವಸ ಇವರು ಹೇಳಿದರೆ ಏನು ಮಾಡಬೇಕು? ಜವಾಬ್ದಾರಿ ಸ್ಥಾನದಲ್ಲಿರತಕ್ಕ ಮಂತ್ರಿಗಳು ಸರ್ಕಾರದ ನೋಟಿಫಿಕೇಷನ್ ನನ್ನ ಗಮನದಲ್ಲಿ, ನಾನು ತಿಳಿದುಕೊಂಡಿಲ್ಲ, ತಪ್ಪು ಮಾಡಿದ್ದೇನೆ, ನೀವು ಯಾವ ಸೆನ್ಸ್‌ನಲ್ಲಿ ಬೇಕಾದರೂ ತೆಗೆದುಕೊಳ್ಳಿ ಎಂದು ಹೇಳಿದರೆ ಹೇಗೆ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ನಾನು ಆ ತಪ್ಪನ್ನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ನಾನೇನೂ ನಾಚಿಕೆಪಡುವುದಿಲ್ಲ. ಅದು ನನ್ನ ಗಮನಕ್ಕೆ ಬಂದ ತಕ್ಷಣ ಅದು ಸರಿಯಲ್ಲ ಎಂದು ತಿಳಿದು ಇದನ್ನು ಪುನರ್‌ಪರಿಶೀಲನೆ ಮಾಡಬೇಕು ಎಂದು ಕಾಗದ ಬರೆದಿದ್ದೇನೆ. ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನೂ ತಿಳಿಸಿದ್ದೇನೆ. 18ನೇ ತಾರೀಖು ಈ ಬಗ್ಗೆ ಒಂದು ಜನರಲ್ ಬಾಡಿ ಮೀಟಿಂಗ್ ಆಗಬೇಕು ಎಂದು ಅವರು ನಿಶ್ಚಯ ಮಾಡಿದ್ದರು. ಇದನ್ನು ಪುನರ್‌ಪರಿಶೀಲನೆ ಮಾಡದೆ ಜನರಲ್ ಬಾಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ದೃಷ್ಟಿಯಿಂದ ಜನರಲ್ ಬಾಡಿ ಮೀಟಿಂಗನ್ನು ನಾನು ರದ್ದು ಮಾಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ನಾನು ಒಂದು ವಿಷಾದದ ಸಂಗತಿ ನಿಮಗೆ ಹೇಳಬೇಕಾಗಿದೆ. ಶ್ರೀಮಾನ್ ಸುಬ್ಬಯ್ಯಶೆಟ್ಟರು ಮಂತ್ರಿಗಳಾದಮೇಲೆ ಮುಖ್ಯಮಂತ್ರಿಯವರಿಗೆ ಸಬ್‌ಸರ್ವೆಂಟ್ ಆಗಿ ಕಲಸ ಮಾಡುತ್ತಿರುವುದನ್ನು ನೋಡಿ ನಮಗೆ ಆಶ್ಚರ್ಯವಾಗಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಕೊಟ್ಟಿರುವ ವರದಿಯಲ್ಲಿ ಕೆಂಪರಾಜ ಅರಸರು ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಹೇಳಿದ್ದರೂ ಕೂಡ ಮುಖ್ಯಮಂತ್ರಿ ಆ ಸಂಸ್ಥೆಗೆ ಮ್ಯಾನೇಜಿಂಗ್ ಡೈರೆಕ್ಟರ್‌ರಾಗಿ ಅವರನ್ನು ನೇಮಕ ಮಾಡಿರುವುದು ಮುಖ್ಯಮಂತ್ರಿಗಳ ತಮ್ಮ ಎಂಬ ಒಂದೇ ಒಂದು ಕಾರಣದಿಂದ ಇದು ಅವರ ಮೇಲೆ ಸಂಪೂರ್ಣ ಪ್ರಭಾವ ಬೀರಿದೆ. ಯಾವ ಕಾನೂನು ನಿಯಮವನ್ನೂ ನೋಡದೆ ಈ ಕೆಲಸವನ್ನು ಮಾಡಿದ್ದಾರೆ. They could not use their own brain because he happened to be the brother of the Chief Minister. ತಪ್ಪು (ಮಾನ್ಯ ಸಚಿವರಾಧ ಸುಬ್ಬಯ್ಯಶೆಟ್ಟರು) ಭಾಗವಹಿಸಿದ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನ ಸಭೆಯಲ್ಲಿ ಕೆಂಪರಾಜರವರು ಮಾತನಾಡಿ ತಾತ್ಕಾಲಿಕವಾಗಿ ಕಂಡಿದ್ದಾರೆ. ಅವರಿಗೆ ನಾಲಿಗೆ ಉದ್ದವಾಗಿದೆ. ಏತಕ್ಕೆಂದರೆ ಅವರಿಗೆ ಬಲ ಇದೆಯೆಂಬ ಧೈರ್ಯ ಇದೆ. ಆದ್ದರಿಂದ ಅವರನ್ನು ಆ ಸ್ಥಾನದಿಂದ ತೆಗೆಯುವೇ ಇದ್ದರೆ ತಮ್ಮ ಮಾನ ಮರ್ಯಾದೆ ಎಲ್ಲಾ ಹರಾಜು ಹಾಕುತ್ತಾರೆ. ನೀವು ನೆಪೊಟಿಸಂ ಆಗುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಉದ್ಯಮ ಸಮಿತಿಯವರು ಅವರ ಬಗ್ಗೆ ಆಪಾದನೆ ಮಾಡಿದ್ದಾರೆ; ಕಾರ್ಪೊರೇಷನ್‌ಗೆ ಸಂಬಂಧಪಟ್ಟ ರೆಫ್ರಿಜರೇಟರನ್ನು ಕೆಂಪರಾಜರವರು ಮನೆಗೆ ತೆಗೆದುಕೊಂಡು ಹೋಗಿ, ನಂತರ ದೂರು ಕೊಟ್ಟ ಮೇಲೆ ಪಾಸಸ್ ತಂದು ಆಫೀಸಿನಲ್ಲಿ ಇಟ್ಟಿದ್ದಾರೆ. ಪೋಲೀಸ್ ರೇಕಾರ್ಡ್ ಇದೆ ಅದಕ್ಕೆ. ಅಮೇಲೆ ಪೆಟ್ರೋಲನ್ನು, ಸಂಸ್ಥೆಯ ಕಾರನ್ನು ದುರುಪಯೋಗಪಡಿಸಿಕೊಂಡಿರುವುದನ್ನು ಲೆಕ್ಕಪತ್ರ ಸಮಿತಿಯವರು ಪ್ರಸ್ತಾಪ ಮಾಡಿದ್ದಾರೆ. ಇಂತಹ ಜನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕಾರ್ಯ ನಿರ್ವಹಿಸಬೇಕು ಎಂದು ಮುಂಡಲಿಯವರು ತೀರ್ಮಾನ ಮಾಡುವುದು ಯಾವ ನ್ಯಾಯ? ಇಷ್ಟೊಂದು ಬಂಡವಾಳ ತೊಡಗಿಸಿ ಉತ್ತಮವಾದ ಉದ್ದಿಮೆಯನ್ನು ಮಾಡಬೇಕು ಎಂದು ಹೊಂಟಿರತಕ್ಕಂಥ ಜನ ನೀವು ಇಂತಹ ಜನರನ್ನು ಅಲ್ಲಿ ಇಟ್ಟರೆ ಹೇಗೆ? ಅವರು ಅಧಿಕಾರ ಬಲದಿಂದ ಏನನ್ನು ಬೇಕಾದರೂ ಮಾಡುವುದಕ್ಕೆ ತಯಾರಿದ್ದಾರೆ ನಮ್ಮ ಸರ್ಕಾರದ ಷೇರ್

ಬಂಡವಾಳ 51 ಪರ್ಸೆಂಟ್ ಇದೆ. ತಾವು ದಯವಿಟ್ಟು ಅವರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಎಂದು ನೇಮಕ ಮಾಡಿ ಏನು ಆಜ್ಞೆ ಮಾಡಿದ್ದೀರಿ ಅದನ್ನು ರದ್ದು ಪಡಿಸಬೇಕು. ನಾನು ಹಿಂದಿನ ಶಾಸನಸಭೆಯಲ್ಲೂ ಹೇಳಿದ್ದೇನೆ, ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಸರ್ಕಾರಿ ಅಧಿಕಾರಿಗಳನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ ನೇಮಕ ಮಾಡಬಹುದು ಎಂದು ಆಗ ಈ ಖಾತೆಯ ಮಂತ್ರಿಗಳಾಗಿದ್ದಂತಹ ಗುಂಡೂರಾಯರು ಪರಿಶೀಲನ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಇಷ್ಟೆಲ್ಲಾ ಇದ್ದರೂ ಕೂಡ ನೀವು ಮತ್ತೆ ಕೆಂಪರಾಜ ಅವರನ್ನೇ ಮ್ಯಾನೇಜಿಂಗ್ ಡೈರೆಕ್ಟರಾಗಿ ನೇಮಕ ಮಾಡುವ ಬಗ್ಗೆ ತೀರ್ಮಾನ ತೆಗೆದುಕೊಂಡಿರುವುದು ಯಾರೂ ಒಪ್ಪತಕ್ಕದ್ದಲ್ಲ. ಸರ್ಕಾರ ಈ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕು. ನಾನು ಸುಬ್ಬಯ್ಯಶೆಟ್ಟರ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ಅವರು ಈ ಕೆಲಸ ಮಾಡುವಷ್ಟು ಕಳೆದರ್ಜೆಗೆ ಇಳಿದಿದ್ದಾರೆ ಎಂದು ನಾನು ವಿಷಾದಪಡಬೇಕಾಗಿದೆ. ತಾವು ದಯವಿಟ್ಟು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಈ ಬಗ್ಗೆ ತೀರ್ಮಾನ ಮಾಡಿ. ಒಂದು ವೇಳೆ ಮುಖ್ಯಮಂತ್ರಿಯವರೇನಾದರೂ ಪ್ರಭಾವ ಬೀರುವುದಕ್ಕೆ ಬಂದರೆ ನಿಮ್ಮ ಮಂತ್ರಿ ಪದವಿಯನ್ನು ಬಿಟ್ಟು ಹೊರಗೆ ಬನ್ನಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಮಾನ್ಯ ವಾರ್ತಾ ಸಚಿವರು ಏನು ಹೇಳಿಕೆ ಕೊಟ್ಟಿದ್ದಾರೆ ಆ ಹೇಳಿಕೆಯನ್ನು ಶ್ರೀಮಾನ್ ಕೆಂಪರಾಜ ಅರಸ್ ಅವರು ಮುಖ್ಯಮಂತ್ರಿಗಳ ತಮ್ಮಂದಿರಲ್ಲದೇ ಹೋಗಿದ್ದರೆ ಕೊಡುತ್ತಿದ್ದರೆ? ಶ್ರೀಮಾನ್ ಸಂಜಯ್‌ಗಾಂಧಿಯವರಿಂದ ಶ್ರೀಮತಿ ಇಂದಿರಾ ಗಾಂಧಿಯವರು ಕೆಳಗೆ ಇಳಿದರು. ಹಾಗೆಯೇ ನಿಮ್ಮ ತಮ್ಮನಿಂದ ನೀವು ಅಧಿಕಾರದಿಂದ ಕೆಳಗೆ ಇಳಿಯಬೇಕಾಗುತ್ತದೆ ಎಂಬುದನ್ನು ಮುಖ್ಯಮಂತ್ರಿಯವರಿಗೆ ತಿಳಿಸುತ್ತಾರೆಯೇ? ಶ್ರೀಮಾನ್ ಕೆಂಪರಾಜ ಅರಸ್ ಅವರು ಎಷ್ಟು ಬಂಡವಾಳ ಹಾಕಿದ್ದಾರೆ, ಎಷ್ಟು ಕನ್ನಡ ಚಿತ್ರಗಳನ್ನು ತಯಾರು ಮಾಡಿದ್ದಾರೆ, ಎಷ್ಟು ಚಿತ್ರಗಳು ಯಶಸ್ವಿಯಾಗಿವೆ ಎಂಬುದನ್ನು ತಿಳಿಸುತ್ತೀರಾ? ಕಾರ್ಪೊರೇಷನ್ನಿನಿಂದ ಸಾಲ ಕೊಡುವಾಗ ಅವರ ಹಸ್ತಕ್ಷೇಪ ಇದೆ ಎಂದು ದೂರು ಇದೆ. ಈ ಬಗ್ಗೆ ಏನು ನಿಲುವನ್ನು ತೆಗೆದುಕೊಂಡಿದ್ದಾರೆ? ಪ್ರೊಡ್ಯೂಸರ್ಸ್‌ಗೆ ಎಕ್ವಿಪ್‌ಮೆಂಟ್ ಕೊಟ್ಟಿದೆ ಎಂದು ಹೇಳಿದ್ದೀರಿ, ಎಷ್ಟು ಎಕ್ವಿಪ್‌ಮೆಂಟ್ ಕೊಟ್ಟಿದಾರೆ? ನಿಮ್ಮ ಹಿತದೃಷ್ಟಿಯಿಂದ ಮತ್ತು ಮುಖ್ಯಮಂತ್ರಿಗಳ ಹಿತದೃಷ್ಟಿಯಿಂದ ಕೆಂಪರಾಜರಸ್ ಅವರನ್ನು ಕಲಸದಿಂದ ತೆಗೆಯುವುದಕ್ಕೆ ಏರ್ಪಾಟು ಮಾಡುತ್ತೀರಾ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಸಭಾಧ್ಯಕ್ಷರೆಯವರೆ, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ನನ್ನ ಮೇಲೆ, ಮುಖ್ಯಮಂತ್ರಿಗಳ ಪ್ರಭಾವಕ್ಕೆ ಒಳಗಾಗಿದ್ದಾರೆಂಬ ಆಪಾದನೆಯನ್ನು ಹೊರಿಸಿದ್ದಾರೆ ಅದನ್ನು ನಾನು ನಿರ್ಭಾವಾಗಿ ಅಲ್ಲಗೆಳೆಯುತ್ತೇನೆ, ಅಲ್ಲದೆ ಅದು ರಾಜಕೀಯ ಉದ್ದೇಶದಿಂದ ಹೇಳಿದ ಮಾತು ಎಂದು ಮಾತ್ರ ಹೇಳಬಯಸುತ್ತೇನೆ. ಏಕೆಂದರೆ ನಾನು ಯಾವ ಪ್ರಭಾವಕ್ಕೂ ಒಳಗಾಗುವುದಿಲ್ಲ ಎಂದು ಸ್ಪಷ್ಟವಾಗಿ ಈ ಸಭಾಸದನದಲ್ಲಿ ಹೇಳುತ್ತೇನೆ ಆ ಒಂದು ಬೋರ್ಡು ಯಾವ ರೀತಿಯಾಗಿ ತೆಗೆಯಲ್ಪಟ್ಟಿತ್ತು ಎಂಬುದನ್ನು ನಾನು ಸ್ಪಷ್ಟವಾಗಿ ತಿಳಿಸಿದ್ದೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು, ಅವರು ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಇನ್ನು ಕೆಲವು ಆಪಾದನೆಗಳನ್ನು ನನ್ನ ಗಮನಕ್ಕೆ ತಂದಿರುವುದಕ್ಕೆ ನಾನು ಅವರಿಗೆ ವಂದಿಸುತ್ತೇನೆ.

ಇನ್ನು ಅವರ ಷೇರ್ ಅಮೌಂಟ್ ಬಗ್ಗೆ ಮಾನ್ಯ ಶಾಮಣ್ಣನವರು ಹೇಳಿದ್ದಾರೆ. ಅವರು ಷೇರು ಅಮೌಂಟನ್ನು ಇನ್‌ವೆಸ್ಟ್ ಮಾಡಿರುವುದು 10 ಸಾವಿರ ರೂಪಾಯಿಗಳು. ಅವರು ಕನ್ನಡದಲ್ಲಿ ಒಟ್ಟು 3 ಸಿನಿಮಾಗಳನ್ನು ಪ್ರೊಡ್ಯೂಸ್ ಮಾಡಿದ್ದಾರೆ ಮತ್ತು ಆಕ್ಟ್ ಮಾಡಿದ್ದಾರೆ ಅದು ನನಗೆ ಚನ್ನಾಗಿ ನೆನಪಿದೆ. ಮಾನ್ಯ ಕೆಂಪರಾಜ್ ಅರಸ್‌ರವರು ಪ್ರೊಡ್ಯೂಸ್ ಮಾಡಿರುವ ಸಿನಿಮಾಗಳನ್ನು ನಾನು ನೋಡಿದ್ದೇನೆ. ಅವರನ್ನು ಪಿಕ್ಚರ್ ಪ್ರೊಡಕ್ಷನ್‌ನಲ್ಲಿ ಒನ್ ಆಫ್ ದಿ ಪಯನೀರ್ಸ್ ಎಂದು ಹೇಳುವುದರಲ್ಲಿ ಯಾವ ರೀತಿಯಾದ ಅಡ್ಡಿ ಆತಂಕವೂ ಇಲ್ಲ ಎಂದು ನಾನು ಹೇಳಬಯಸುತ್ತೇನೆ.

ಒಬ್ಬರು ಮಾನ್ಯ ಸದಸ್ಯರು.— ನಾಗೇಂದ್ರರಾವ್‌ರವರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಒಬ್ಬ ಮನುಷ್ಯನಿಗೆ ಇರಬೇಕಾದ ಅರ್ಹತೆ ಬಗ್ಗೆ ವಿಚಾರ ಮಾಡುವಾಗ, ಸುಬಂಧನ ಪ್ರಶ್ನೆ ಅಡ್ಡಿ ಬರುವಾರದೆಂದು ಹೇಳುತ್ತೇನೆ.

10-30 A.M.

SRI KAGODU THIMMAPPA.—The way in which he has mis-used the power is a clear proof.

SRI B. SUBBAYYA SHETTY.-If he has mis-used his office definitely action will be taken. Sofar as the appointment is concerned I have not asked the Board to reconsider it. But about the emoluments I have asked the Board to reconsider. Even his appointment will have to be approved by the Government and also by the Company Law Dept., of the Government of India.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ, ಮಾನ್ಯ ಕೆಂಪರಾಜ ಅರಸ್ ಅವರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಮುಂದುವರಿಯುವ ನಲುವಾಗಿ ಜನರಲ್ ಬಾಡಿ ಮೀಟಿಂಗ್ ಕರೆಯುವುದನ್ನು ರದ್ದುಪಡಿಸಿದ್ದಾರೆ. ಬೋರ್ಡ್ ಮೀಟಿಂಗ್ ಪ್ರಕಾರ ಜನವರಿ ಒಂದರಿಂದ ಕೆಲಸದಲ್ಲಿದ್ದಾರೆ. ಇವತ್ತು ನಮ್ಮ ಒತ್ತಾಯವೇನೆಂದರೆ ಅವರನ್ನು ಮ್ಯಾನೆಜಿಂಗ್ ಡೈರೆಕ್ಟರ್ ಆಗಿ ಮುಂದುವರಿಯಲು ಅವಕಾಶ ಕೊಡದೆ ಆನಾಮತ್ತುಗೊಳಿಸಬೇಕು ಮತ್ತು ಜನರಲ್ ಬಾಡಿ ಮೀಟಿಂಗ್ ಆಗಿ ಆಯ್ಕೆಯಾಗುವವರೆಗೆ ಜಾರಿಗೆ ಕೊಡಬಾರದೆಂದು.

ಅಧ್ಯಕ್ಷರು.—ಅವರು ಡೈರಕ್ಟರೇ ಹೊರತು ಮ್ಯಾನೇಜಿಂಗ್ ಡೈರೆಕ್ಟರ್ ಅಲ್ಲ.

ಬಿ. ಸುಬ್ಬಯ್ಯ ಶೆಟ್ಟಿ.—ಅವರು ವೇದಲು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಫಂಕ್ಷನ್ ಮಾಡುತ್ತಿದ್ದರು. ಆದರೆ ಅವರು ಈಗ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಫಂಕ್ಷನ್ ಮಾಡುವುದಿಲ್ಲ. ಅವರು ಈಗ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಎಮೊಲ್ಯುಮೆಂಟ್ಸ್ ಕೊಡುವ ಬಗ್ಗೆ ರೆಸಲ್ಯೂಷನ್ ಪಾಸಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಫಿಲಂಗಳು ಜನತೆಯ ಮನರಂಜನೆಗೆ ಬಹಳ ಅವಶ್ಯಕ ವೆಂದು ಸಮರ್ಥನೆ ಮಾಡಿ ಮಾನ್ಯ ಕೆಂಪರಾಜ್ ಅರಸ್‌ರವರಿಗೆ ಸಹಾಯ ಮಾಡಿದ್ದೀರಿ. ಆದರೆ ಫಿಲಂ ಪ್ರೊಡ್ಯೂಸರ್ಸ್ ಹೆವಲಪ್‌ಮೆಂಟ್ ಬಗ್ಗೆ ವಿವರಣೆ ನೀಡಿಲಿಲ್ಲ. ಅದು ಎಲ್ಲಿ ಮುಳುಗಿತೆಂಬುದನ್ನು ಹೇಳಿಲ್ಲ. ನಾನು ಈ ಬಗ್ಗೆ ಈಗ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದರದ್ದೇ ಒಂದು ಇತಿಹಾಸ ಇದೆ. ಮಾನ್ಯ ಕೆಂಪರಾಜ್ ಅರಸ್‌ರವರಿಗಿಂತ ಉತ್ತಮವಾಗಿ ಕೆಲಸ ಮಾಡತಕ್ಕವರು ರಾಜ್ಯದಲ್ಲಿ ಇಲ್ಲ ಎಂದು ತಿಳಿದುಕೊಳ್ಳಬಾರದು. ರಾಷ್ಟ್ರ ಮಟ್ಟದಲ್ಲಿ ಉನ್ನತವಾದ ಸ್ಥಾನವನ್ನು ಪಡೆದಂತಹ ವ್ಯಕ್ತಿಗಳಿದ್ದಾರೆ. ಮಾನ್ಯ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆ ಮಾನ್ಯ ಕೆಂಪರಾಜ್ ಅರಸ್‌ರವರು ಎಲ್ಲಿದ್ದರು? ಅವರ ಬೆಂಬಲ ಇಲ್ಲದಿದ್ದರೆ ಎಲ್ಲಿ ಬರುತ್ತಿದ್ದರು? ಆದುದರಿಂದ ಈ ರೀತಿಯಾಗಿ ಇದು ನಮಗೆ ಗೊತ್ತಾಗುವುದಿಲ್ಲ, ಪೇಪರ್‌ದ ಜನತೆಗೆ ಗೊತ್ತಾಗುವುದಿಲ್ಲವೆಂದು ಹೇಳಿಕೊಳ್ಳಲು ಬೇಡ. ಇಂಥ ವಿಷಯಗಳನ್ನು ಇನ್ನು ಮೇಲಾದರೂ ಸಲ್ಲಿಸಿ ಯೋಗ್ಯವಾದ ಅದೇಶವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಿಳಿಸಬಯಸುತ್ತೇನೆ.

(ಉತ್ತರ ಇಲ್ಲ)

MOTION OF THANKS TO GOVERNOR'S ADDRESS

SRI B. BASAVALINGAPPA (Uttarahalli).—Madam Speaker, I beg to move:

> "That we the Members of the Karnataka Legislative Assembly assembled in this Session, beg leave to thank Governor for the Address delivered to the Members of the Legislature on 25th March, 1977".